

# ಶತಾಯುಷಿಯ ಶಾದಿ!

ಇತ್ತೀಚೆಗೆ ಅಸ್ಸಾಂನ ಕರೀಂಗಂಜ್ ಜಿಲ್ಲೆಯ ಸತ್ಕೋರಿ ಎಂಬ ಹಳ್ಳಿಯಲ್ಲಿ ಮದುವೆಯೊಂದು ನಡೆಯಿತು. 'ಅದರಲ್ಲೇನು ವಿಶೇಷ' ಅಂತೀರಾ? ಈ ವರನ ವಯಸ್ಸು ಬರೋಬ್ಬರಿ 120 ವರ್ಷ! ವಧುವಿನ ವಯಸ್ಸು 60 ವರ್ಷ! ಮೊಮ್ಮಕ್ಕಳ ಮದುವೆ ಮಾಡಬೇಕಾದ ಈ ಅಜ್ಜ, ಹಾಜಿ ಅಬ್ದುಲ್ ನೂರ್ ತಾನೇ ಬಯಸಿ ಮರುಮದುವೆ ಮಾಡಿಕೊಂಡಿರುವುದು ಉತ್ತರ ತ್ರಿಪುರಾ ಬಳಿಯಿರುವ ನಾರ್ತ್ ಪೂಲ್ ಹಳ್ಳಿಯ ಸಮೋಯಿ ನೂರ್ ಬೀಬಿಯನ್ನು.

ಬ್ರಿಟಿಷರ ಕಾಲದಲ್ಲಿ ದಕ್ಷಿಣ ಅಸ್ಸಾಂನಲ್ಲಿ ಕಾಂಟ್ರಾಕ್ಟರ್ ಆಗಿ ವೃತ್ತಿ ಶುರು ಮಾಡಿದ ಶತಾಯುಷಿ ಅಬ್ದುಲ್ ನೂರ್‌ನ ಮೊದಲ ಮದುವೆ ಈತ 40 ವರ್ಷದವನಿದ್ದಾಗ ಸಲೀಮಾ ಕಾತೂನ್ ನೂರ್‌ಳೊಂದಿಗೆ ನಡೆದಿತ್ತು. ಆದರೆ 2005ರಲ್ಲಿ ಸಲೀಮಾ ಗತಿಸಿದಳು. ಆವಾಗಿನಿಂದ ಈ ಅಜ್ಜ, 'ನನಗೊಂದು ಹೆಂಡತಿಯನ್ನು ಹುಡುಕಿ ಕೊಡಿ' ಎಂದು ಮಕ್ಕಳಲ್ಲಿ ದುಂಬಾಲು ಬಿದ್ದಿದ್ದನಂತೆ.

'ನಮ್ಮ ತಾಯಿ ತೀರಿಕೊಂಡಾಗಿನಿಂದಲೂ ಅಪ್ಪ ತನ್ನನ್ನು ನೋಡಿಕೊಳ್ಳಲು ಹೊಸ ಹೆಂಡತಿಯನ್ನು ಹುಡುಕಿಕೊಡಿ ಎಂದು ಕೇಳುತ್ತಲೇ ಇದ್ದ. ಅಂತೂ ಇಂತೂ ಅಲ್ಲಾಹನ ಕೃಪೆಯಿಂದ ಅಪ್ಪನ ಅರ್ಧದಷ್ಟು ವಯಸ್ಸಿನ ಮಕ್ಕಳಿಲ್ಲದ ವಿಧವೆ ನಮಗೆ ಹೊಸ ತಾಯಿಯಾಗಿ ಸಿಕ್ಕರು' ಎಂದು ಅಬ್ದುಲ್ ನೂರ್‌ನ ಮಗ, ನಿವೃತ್ತ ಶಿಕ್ಷಕ ಅಜರುದ್ದೀನ್ ಸಂತಸದಿಂದ ಹೇಳುತ್ತಾನೆ.

ಅತ್ಯಂತ ಅಪರೂಪದ ಈ ಅಜ್ಜನ ಕಲ್ಯಾಣಕ್ಕೆ ಧಾರ್ಮಿಕ ಗುರುಗಳೂ ಸೇರಿದಂತೆ ಸುಮಾರು 500 ಮಂದಿ ಅತಿಥಿಗಳು ಆಗಮಿಸಿದ್ದರಂತೆ. ನಿಖಾ ಮಾಡಿಸಲು ಕುಳಿತ ಹಿರಿಯರಾದ ಮೌಲಾನಾ ಕೈರುಜ್ಜಾಮನ್ 'ಕಬೂಲ್' (ಮದುವೆಗೆ ಒಪ್ಪಿಗೆ) ಕೇಳಿದಾಗ ಅಬ್ದುಲ್ ಅತೀವ ಸಂತಸದಿಂದ ತಲೆಯಲ್ಲಾಡಿಸಿ ಸಮ್ಮತಿ ನೀಡಿದನಂತೆ. ಅತಿಥಿಗಳಿಗೆ ಭರ್ಜರಿ ಸಿಹಿಯೂಟ ಇತ್ತಂತೆ.

ಈಗ 2 ಗಂಡು, 4 ಹೆಣ್ಣು ಮಕ್ಕಳು ಹಾಗೂ ಮೊಮ್ಮಕ್ಕಳೆಲ್ಲರೂ ಸೇರಿ 122 ಜನರ ತುಂಬು ಕುಟುಂಬ ಈ ಅಬ್ದುಲ್ ನೂರ್ ಅಜ್ಜನದು. ಅಂದ ಹಾಗೆ, ಈತನ ಹಿರಿಮಗಳ ವಯಸ್ಸು 79 ವರ್ಷ!

■ ವಿದ್ಯಾ ವಿ ಹಾಲಭಾವಿ

